ಪಂಚಾಯಿತಿಯವರು ಅದರಲ್ಲಿ ಹಸ್ತಕ್ಷೇಪ ಮಾಡಬಾರದೆಂದು ಸಚಿವರು ಉತ್ತರವನ್ನು ಕೊಟ್ಟಿದ್ದರು. ಕಾನೂನಿನಲ್ಲೂ ಹಾಗೆಯೇ ಇದೆ. ಆದರೆ ಮೊನ್ನೆ ಪುನಃ ನನ್ನ ಕ್ಷೇತ್ರದ ಚೀರ್ಕಾಡಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸಭೆಗೆ ದಿನಾಂಕವನ್ನು ನಿಗದಿ ಮಾಡಿದ್ದರು, ಆದರೆ ಅದಕ್ಕೂ ಮೊದಲೇ ತಾಲ್ಲೂಕು ಪಂಚಾಯಿತಿಯವರು ಗ್ರಾಮಸಭೆಯನ್ನು ಮಾಡಲು ಹೋದರು ಗ್ರಾಮ ಪಂಚಾಯಿತಿಯವರೇನು ಗ್ರಾಮಸಭೆಯನ್ನು ನಿಗದಿ ಮಾಡಿದ್ದರೋ ಅದಕ್ಕೆ ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ತಡೆಯಾಜ್ಞೆಯನ್ನು ಕೊಟ್ಟಿರುತ್ತಾರೆ. ಆ ರೀತಿ ಗ್ರಾಮಸಭೆಗೆ ತಡೆಯಾಜ್ಞೆ ನೀಡಿದಂಥ ಅದೇಶಕ್ಕೆ ಎಗ್ಸಿಕ್ಯುಟೀವ್ ಅಧಿಕಾರಿ ಸಹಿ ಹಾಕುತ್ತಿಲ್ಲ, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರೇ ಸಹಿಯನ್ನು ಹಾಕಿರುತ್ತಾರೆ. ಅಧಿಕಾರ ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಈ ಪರಿಸ್ಥಿತಿ ನಿರ್ಮಾಣವಾಗಬಾರದೆಂದು ಹೇಳಿ ಮಾನ್ಯ ಕಾನೂನು ಸಚಿವರಿಂದ ಸ್ಪಷ್ಟೀಕರಣ ಕೋರಿ ಇದನ್ನು ಕೇಳುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಕಾನೂನಿನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಕಾನೂನನ್ನು ಮೀರಿ ಯಾರು ಅಧಿಕಾರವನ್ನು ಚಲಾಯಿಸುತ್ತಾರೋ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ. ಇದು ಚರ್ಚೆಗೆ ವಿಚಾರವೇ ಅಲ್ಲ. ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರು ಏನಾದರೂ ಗ್ರಾಮಸಭೆಗೆ ತಡೆಯಾಜ್ಞೆ ಕೊಟ್ಟಿದ್ದರೆ ಅದಕ್ಕೆ ಯಾವುದೇ ಬೆಲೆ ಇರುವುದಿಲ್ಲ.

(ಐ) ಮೈಸೂರ್ ಲ್ಯಾಂಪ್ಸ್ ಕಾರ್ಖಾನೆ ಕುರಿತು.

ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಬೆಂಗಳೂರಿನಲ್ಲಿ ಮೈಸೂರ್ ಲ್ಯಾಂಪ್ಸ್ ಎಂಬ ಬಹಳ ಪ್ರಸಿದ್ಧವಾದ ಕಾರ್ಖಾನೆ ಇದೆ. 1936ನೇ ಇಸವಿಯಿಂದ ಇಡೀ ನಾಡಿಗೆ ಬೆಳಕನ್ನು ಕೊಡುತ್ತಿದ್ದಂಥ ಈ ಕಾರ್ಖಾನೆ ಇವತ್ತು ಸ್ವತಃ ಅಂಧಕಾರದಲ್ಲಿದೆ. ಇಲ್ಲಿರುವ ಸುಮಾರು 1600 ಜನ ನೌಕರರಿಗೆ ನಾಳೆಯ ಗತಿಯೇನೋ ಎಂಬುದು ಗೊತ್ತಾಗುತ್ತಿಲ್ಲ. ಬಿ.ಎಫ್.ಆರ್. ಮತ್ತು ಪಿ.ಪಿ.ಐ.ಎಫ್.ಆರ್. ಎರಡೂ ಇದನ್ನು ಮುಚ್ಚಬೇಕೆಂದು ಸಲಹೆ ನೀಡಿದೆ. ಇದು ಸರ್ಕಾರದ ಕಾರ್ಖಾನೆ, ಅಲ್ಲಿರುವ ನೌಕರರ ಜೀವನದ ಪ್ರಶ್ನೆಯೇನು? ಸರ್ಕಾರ ಆ ಕಾರ್ಖಾನೆಯನ್ನು ಮುಚ್ಚುತ್ತದೋ ಅಥವಾ ಅಲ್ಲಿರುವ ನೌಕರರಿಗೆ ಸ್ವಯಂ ನಿವೃತ್ತಿ ಯೋಜನೆಯ ಪ್ರಕಾರ ಯೋಗ್ಯವಾದ ಆರ್ಥಿಕ ಬೆಂಬಲವನ್ನು ಅಂದರೆ ಪಿ.ಆರ್.ಎಸ್. ಕೊಟ್ಟು ಕಳುಹಿಸುತ್ತದೆಯೋ ಎಂಬುದನ್ನು ತಿಳಿಸಬೇಕು. ಇವತ್ತಿಗೂ ಮಾರುಕಟ್ಟೆಯಲ್ಲಿ ಮೈಸೂರ್ ಲ್ಯಾಂಪ್ಸ್ ಒಳ್ಳೆಯ ಬ್ರಾಂಡ್ ಈಕ್ವಿಟಿಯನ್ನು ಇಟ್ಟುಕೊಂಡಿದೆ. ಆ ಕಾರ್ಖಾನೆಯನ್ನು ನಡೆಸುವುದರ ಬಗ್ಗೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ? ಆ ಮೂರರಲ್ಲಿ ಸರ್ಕಾರ ಯಾವುದಾದರೂ ಒಂದು

ಕ್ರಮವನ್ನಾದರೂ ತೆಗೆದುಕೊಳ್ಳಬೇಕು. ಇಷ್ಟು ದಿವಸ ರೈತರ ಆತ್ಮಹತ್ಯೆ ನೋಡುತ್ತಿದ್ದೆವು, ಇನ್ನು ಮುಂದೆ ಬೆಂಗಳೂರಿನಲ್ಲಿ ಈ ರೀತಿ ಕಾರ್ಖಾನೆ ನೌಕರರ ಆತ್ಮಹತ್ಯೆಯನ್ನು ನೋಡಬೇಕಾಗುತ್ತದೆ. ಆದ್ದರಿಂದ ಸರ್ಕಾರ ಬಹಳ ತುರ್ತಾಗಿ ಇದರ ಬಗ್ಗೆ ಗಮನ ಕೊಡಬೇಕು. ಅಲ್ಲಿನ ನೌಕರರು ಕಳೆದ ಮೂರು-ನಾಲ್ಕು ವರ್ಷಗಳಿಂದ ಯಾವುದೇ ತುಟ್ಟಿಭತ್ಯೆ ಇತರೆ ಸೌಲಭ್ಯಗಳನ್ನು ಕೇಳದೆ ತ್ಯಾಗ ಮಾಡಿಕೊಂಡು ಬಂದಿದ್ದಾರೆ. ಅಲ್ಲಿರುವ ನೌಕರರ ಭವಿಷ್ಯದ ದೃಷ್ಟಿಯಿಂದ ಸರ್ಕಾರ ದಯಮಾಡಿ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು): ಅದಕ್ಕೆ ಸ್ವಲ್ಪ ದುಡಿಯುವ ಬಂಡವಾಳವನ್ನು ಕೊಟ್ಟರೆ ಕಾರ್ಖಾನೆ ಮತ್ತೆ ಪ್ರಾರಂಭವಾಗುತ್ತದೆ. ಅಲ್ಲಿನ ನೌಕರರಿಗೆ ಎರಡು ತಿಂಗಳಿನಿಂದ ಸಂಬಳವಿಲ್ಲ. ಬಿ.ಐ.ಎಫ್.ಆರ್. ಬಿ.ಐ.ಎಫ್.ಆರ್ ಏನು ಸಲಹೆ ನೀಡಿದೆ ಅದರ ಬಗ್ಗೆ ಅಪೀಲ್ ಹೋದರೆ ಒಳ್ಳೆಯದು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು): ಅದೊಂದು ಪ್ರಿಸ್ಟೀಜಿಯಸ್ ಸಂಸ್ಥೆ ಎಂಬುದನ್ನು ನಾನೂ ಸಹ ಒಪ್ಪುತ್ತೇನೆ. ಬಹಳ ದೀರ್ಘಕಾಲ ಮೈಸೂರ್ ಲ್ಯಾಂಪ್ಸ್ ತನ್ನ ಪ್ರಖ್ಯಾತಿಯಲ್ಲಿ ಮೆರೆದಂಥ ಕಾರ್ಖಾನೆ. ಈಗ ಏಕೆ ಆ ರೀತಿಯಾಗಿದೆಯೋ ಗೊತ್ತಿಲ್ಲ. ಇದನ್ನು ಸಂಬಂಧಪಟ್ಟ ಸಚಿವರ ಗಮನಕ್ಕೆ ತಂದು ಏನಾದರೂ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷರು: ಈಗ ಶೂನ್ಯವೇಳೆ ಮುಕ್ತಾಯವಾಯಿತು. ಇನ್ನು ಗಮನಸೆಳೆಯುವ ಸೂಚನೆಗಳು.